ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸೆಷನ್ಸ್‌ಕೇಸ್ ನಂಬರ್ : 252/2022**

**ಪ್ರಾಸಾ- 15 ಚಾಸಾ- 31**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಗಣೇಶ |
| ತಂದೆಯ ಹೆಸರುಃ | : | ಸ್ವಾಮಯ್ಯ |
| ವಯಸ್ಸುಃ | : | 39 ವರ್ಷ |
| ಉದ್ಯೋಗಃ | : | ಪಿ ಎಸ್ ಐ, ಕುಶಾಲನಗರ ಸಂಚಾರಿ ಪಿ ಎಸ್ |
| ವಾಸ | : | ಕುಶಾಲನಗರ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:23-08-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ನಾನು ಆಲೂರು ಪೊಲೀಸ್ ಠಾಣೆಯಲ್ಲಿ ದಿನಾಂಕ 28-6-21ರಿಂದ 29-1-23ರವರೆಗೆ ಆಉನಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿನಾಂಕ 7-6-22ರಂದು ಈ ಪ್ರಕರಣದ ಕಡತವನ್ನು ಚಾಸಾ-30ರವರಿಂದ ಸ್ವೀಕರಿಸಿ ತನಿಖೆ ಮುಂದುವರೆಸಿದೆನು. ಅದೇ ದಿವಸ ಚಾಸಾ-9 ರಿಂದ 11 ರವರಿಗೆ ಮೃತ ಆನಂದನ ಶವಪಂಚನಾಮೆ ಕಾಲದಲ್ಲಿ ಹಾಜರಿರುವಂತೆ ನೋಟೀಸನ್ನು ಜಾರಿ ಮಾಡಿರುತ್ತೇನೆ. ಹಾಸನ ಹಿಮ್ಸ್ ಆಸ್ಪತ್ರೆಯ ಶವಾಗಾರದಲ್ಲಿ ಮಧ್ಯಾಹ್ನ 3 ರಿಂದ 6 ಗಂಟೆ ಸಮಯದಲ್ಲಿ ಚಾಸಾ-9ರಿಂದ 11 ರವರ ಸಮಕ್ಷಮ ಸದರಿ ಶವದ ಪಂಚನಾಮೆಯನ್ನು ನಿಪಿ-10ರಂತೆ ನಡೆಸಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-10(ಬಿ) ಎಂದು ಗುರುತಿಸಲಾಯಿತು. ಅದೇ ಸಮಯದಲ್ಲಿ ಚಾಸಾ-7 ಮತ್ತು 12 ರವರ ಹೇಳಿಕೆ ಮಾಡಿಕೊಂಡಿರುತ್ತೇನೆ. ಚಾಸಾ-12 ನನ್ನ ಸಮಕ್ಷಮ ನಿಪಿ-15 ರಂತೆ ಹಾಗೂ ಚಾಸಾ-7ರವರು ನನ್ನ ಸಮಕ್ಷಮ ನಿಪಿ-7ರಂತೆ ಹೇಳಿಕೆ ನೀಡಿರುತ್ತಾರೆ. ನಂತರ ಶವಪರೀಕ್ಷೆ ನಡೆಸಿಕೊಡಲು ಚಾಸಾ-24ರವರಿಗೆ ಮನವಿ ಸಲ್ಲಿಸಿರುತ್ತೇನೆ.

3.ದಿನಾಂಕ 8-6-22 ರಂದು ಚಾಸಾ-17 ರಿಂದ 19ರವರ ಸಮಕ್ಷಮ ಮೃತರಿಗೆ ವಾರಸುದಾರರು ಯಾರೂ ಇಲ್ಲದ ಕಾರಣ ಸದರಿ ಮೃತ ಶರೀರದ ಅಂತ್ಯಸಂಸ್ಕಾರವನ್ನು ಆಲೂರಿನ ಹಿಂದೂ ರುದ್ರಭೂಮಿಯಲ್ಲಿ ನಡೆಸಿರುತ್ತೇನೆ. ಈ ಬಗ್ಗೆ ನಿಪಿ-16ರಂತೆ ಪಂಚನಾಮೆಯನ್ನು ನಡೆಸಿರುತ್ತೇನೆ. ಅದೇ ಸಮಯದಲ್ಲಿ ಈಗ ನೋಡುತ್ತಿರುವ 4 ಫೋಟೋ ತೆಗೆಸಿರುತ್ತೇನೆ. ನಿಪಿ-16ರಲ್ಲಿ ನನ್ನ ರುಜು ಇದ್ದು ನಿಪಿ-16(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಗುರುತಿಸಿದ 4 ಫೋಟೋಗಳನ್ನು ನಿಪಿ-23 ರಿಂದ 26 ಎಂದು ಗುರುತಿಸಲಾಯಿತು. ನಂತರ ಮುಂದಿನ ತನಿಖೆಯನ್ನು ಚಾಸಾ-32ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

ಚಾಸಾ-7 ಮತ್ತು 12 ರವರು ನನ್ನ ಸಮಕ್ಷಮ ನಿಪಿ-7 ಮತ್ತು 15 ರಂತೆ ಹೇಳಿಕೆಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ-10ರಂತೆ ಶವಪಂಚನಾಮೆಯನ್ನು ನಾನು ಶವಾಗಾರದಲ್ಲಿ ನಡೆಸಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**